1992-93ರ ವೇಳೆಗೆ ರಾಜ್ಯದಲ್ಲಿರುವ ಸರ್ಕಾರಿ ಖಾಸಗಿ ಪ್ರೌಢಶಾಲೆಗಳ ವಿವರದ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಗಳು	ಸರ್ಕಾರಿ ಪ್ರೌಢಶಾಲೆಗಳು	ಖಾಸಗಿ ಪ್ರೌಢಶಾಲೆ ಅನುದಾನ ಸಹಿತ	ಖಾಸಗಿ ಪ್ರೌಢಶಾಲೆ ಅನುದಾನ ರಹಿತ
1.	ಬೆಂಗಳೂರು ಉತ್ತರ	25	112	154
2.	ಬೆಂಗಳೂರು ದಕ್ಷಿಣ	37	107	175
3.	ಬೆಂಗಳೂರು ಗ್ರಾಮಾಂತರ	56	72	61
4.	ಕೋಲ್ಲಾರ	105	59	77
5.	ತುಮಕೂರು	88	180	141
6.	ಚಿತ್ರದುರ್ಗ	92	178	85
7.	ಶಿವಮೊಗ್ಗ	115	109	50
8.	ಮೈಸೂರು	120	103	96
9.	ಮಂಡ್ಯ	90	46	33
10.	ದಕ್ಷಿಣ ಕನ್ನಡ	145	153	24
11.	ಕೊಡಗು	25	36	14
12.	ಚಿಕ್ಕಮಗಳೂರು	48	73	41
13.	ಹಾಸನ	147	70	130
14.	ಬೆಳಗಾಂ	58	183	106
15.	ಬಿಜಾಪುರ	54	123	138
16.	ಉತ್ತರ ಕನ್ನಡ	46	128	32
17.	ಧಾರವಾಡ	80	190	190
18.	ಗುಲ್ಬರ್ಗಾ	162	34	55
19.	ಬೀದರ್	65	42	53
20.	ಬಳ್ಳಾರಿ	69	64	44
21.	ರಾಯಚೂರು	93	35	37
		1720	2097	1736
				ಒಟ್ಟು 5553

ರಾಜ್ಯದ ಅರಣ್ಯದ ಅಭಿವೃದ್ಧಿ

1000 (1856): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಅರಣ್ಯ ಇಲಾಖೆಯ ಕ್ಷೇತ್ರವೆಷ್ಟು;

ಆ) ಕಳೆದ 50 ವರ್ಷಗಳಲ್ಲಿ ಹೆಚ್ಚಿನ ಅರಣ್ಯ ಅಭಿವೃದ್ಧಿಪಡಿಸಿದ ಕ್ಷೇತ್ರವೆಷ್ಟು;

ಇ) ಅರಣ್ಯ ಪ್ರದೇಶಗಳಲ್ಲಿರುವ ವನ್ಯ ಜೀವಿಗಳನ್ನು ರಕ್ಷಿಸಲು ಹಾಗೂ ಕುಡಿಯುವ ನೀರಿನ

ಸೌಕರ್ಯ ಒದಗಿಸಲು ಸಣ್ಣ ಪ್ರಮಾಣದ ಕೆರೆ ನಿರ್ಮಿಸಲು ಅರಣ್ಯ ಇಲಾಖೆಗೆ ಇರುವ ತೊಂದರೆ ಏನು ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):-

ಅ) ವರ್ಗೀಕರಿಸದ ಹಾಗೂ ಕಂದಾಯ ಇಲಾಖೆ ಖಾತೆಯ ಕ್ಷೇತ್ರವೂ ಸೇರಿದಂತೆ ಒಟ್ಟು 38,723.56 ಚದರ ಕಿ.ಮೀ. ಅರಣ್ಯ ಪ್ರದೇಶವಿರುತ್ತದೆ.

ಆ) 1956-57ರಲ್ಲಿ ಒಟ್ಟು ಅರಣ್ಯ ಪ್ರದೇಶ 13,553.68 ಚದರ ಕಿ.ಮೀ.ಗಳಷ್ಟಿದ್ದದ್ದು ವರ್ಗೀಕರಿಸಿದ ಹಾಗೂ ಕಂದಾಯ ಇಲಾಖೆ ಅಧೀನ ಕ್ಷೇತ್ರವೂ ಸೇರಿದಂತೆ 1991-92ರ ಅಂತ್ಯದವರೆಗೆ ಒಟ್ಟು 38,723.56 ಚದರ ಕಿ.ಮೀ. ಅರಣ್ಯ ಪ್ರದೇಶವಿರುತ್ತದೆ. ಆದ್ದರಿಂದ ಮೇಲೆ ಕಾಣಿಸಿದ ವರ್ಷಗಳಲ್ಲಿ ಇಲಾಖೆಯು ಅಭಿವೃದ್ಧಿಪಡಿಸಿದ ಅರಣ್ಯ ಪ್ರದೇಶವು ಸುಮಾರು 25,169.88 ಚದರ ಕಿ.ಮೀ.ಗಳಿಗೂ ಹೆಚ್ಚಾಗಿರುತ್ತದೆ.

ಇ) ರಾಷ್ಟ್ರೀಯ ಉದ್ಯಾನವನಗಳು ಹಾಗೂ ಅಭಯಾರಣ್ಯಗಳಲ್ಲಿ ವನ್ಯ ಜೀವಿಗಳಿಗೆ ಕುಡಿಯಲು ನೀರಿಗಾಗಿ ತಡೆ ಅಣೆಕಟ್ಟುಗಳನ್ನು ಕೆರೆಗಳನ್ನು ಮತ್ತು ಉಪ್ಪುದಾಣಗಳನ್ನು ನಿರ್ಮಿಸಲಾಗಿದೆ. ಬೇಸಿಗೆಯಲ್ಲಿ ನೀರಿನ ಅಭಾವದ ತೀವ್ರತೆಯನ್ನು ಕಡಿಮೆ ಮಾಡಲು ಪಿಕ್‌ಅಪ್ ಡ್ಯಾಮುಗಳನ್ನು ಹಾಗೂ ಬೋರ್‌ವೆಲ್‌ಗಳನ್ನು (ಕೊಳವೆ ಬಾವಿ) ಹಲವಾರು ಅಭಯಾರಣ್ಯಗಳು: ರಾಷ್ಟ್ರೀಯ ಉದ್ಯಾನವನಗಳಲ್ಲಿ ತೋಡಲಾಗಿದೆ. ಪ್ರಾಣಿಗಳ ರಕ್ಷಣೆಗಾಗಿ ವನ್ಯಜೀವಿ ವಿಭಾಗದ ಹಾಗೂ ಪ್ರಾದೇಶಿಕ ಅರಣ್ಯ ವಿಭಾಗದ ಸಿಬ್ಬಂದಿಗಳಿಗೆ 0:313 ರೈಫಲ್ಲುಗಳು, ಡಿಜಿಜಿಎಲ್ ಗನ್ನುಗಳು ಸಾಕಷ್ಟು ಪ್ರಮಾಣದಲ್ಲಿ ಮದ್ದು ಗುಂಡುಗಳನ್ನು, ನಿಸ್ತಂತು ಉಪಕರಣಗಳು, ಪೆಟ್ರೋಲ್‌ನಿಂದ ಓಡುವ ವೇಗದ ವಾಹನಗಳು, ಇತ್ಯಾದಿಗಳನ್ನು ಒದಗಿಸಲಾಗಿದೆ. ಆಯಕಟ್ಟಿನ ಸ್ಥಳಗಳಲ್ಲಿ ವೀಕ್ಷಕ ಗೋಪುರಗಳನ್ನು ಕೂಡ ಕಟ್ಟಲಾಗಿದೆ. ಮೇಲ್ಕಂಡ ರಕ್ಷಣಾ ಕಾರ್ಯಕ್ರಮಗಳಿಂದಾಗಿ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯಗಳಲ್ಲಿ ವನ್ಯ ಪ್ರಾಣಿಗಳ ಹತ್ಯೆ ಕಡಿಮೆಯಾಗಿದ್ದು ಅವುಗಳು ನಿರಾತಂಕವಾಗಿ ನೆಮ್ಮದಿಯ ಜೀವನ ನಡೆಸಲು ಅನುಕೂಲ ಮಾಡಿಕೊಡಲಾಗಿದೆ.

ರಾಜ್ಯದಲ್ಲಿರುವ ಜಾನುವಾರುಗಳ ತಳಿಯ ಅಭಿವೃದ್ಧಿಗೆ ವ್ಯವಸ್ಥೆ

1001 (1855): ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಸಂಕೇಶ್ವರ):-

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು; (ಆಕಳು, ಎಮ್ಮೆ ಕೋಣ, ಎತ್ತು ಮತ್ತು ಕುರಿಗಳೆಷ್ಟು ?ಪ್ರತ್ಯೇಕ ವಿವರ ನೀಡುವುದು);

ಆ) ಒಳ್ಳೆಯ ತಳಿಗಳ ಎತ್ತುಗಳನ್ನು ಪಡೆಯುವುದಕ್ಕಾಗಿ ಸರ್ಕಾರದ ಕಾರ್ಯಕ್ರಮವೇನು;

ಇ) ರಾಜ್ಯದಲ್ಲಿ ಎಷ್ಟು ಒಳ್ಳೆಯ ತಳಿಗಳು ಇವೆ; (ಕಿಲಾರಿ, ಕರಸುಂಡಿ, ಅಮೃತ ಮಹಲ ಹಾಗೂ ಇನ್ನುಳಿದ ಜಾತಿಗಳ ವಿವರ ನೀಡುವುದು);

ಈ) ಪ್ರತಿಯೊಂದು ಜಿಲ್ಲೆಯಲ್ಲಿ ಇಂಥ ತಳಿಯ ಅಭಿವೃದ್ಧಿ ಕೇಂದ್ರಗಳಿಗೆ ಇದುವರೆಏಗೂ ಎಷ್ಟು ಮಂತ್ರಿಗಳು ಭೇಟಿ ನೀಡಿರುತ್ತಾರೆ ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):-